ವಿಪುಲ ಅವಕಾಶಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳೂ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಿತು. ಆದಾಗ್ಯೂ ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮತ್ತು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ ರವರು ಈ ಯೋಜನೆಗೆ ಒಪ್ಪಿಗೆಯನ್ನು ನೀಡಿವೆ.

ಇ) ಸಾರ್ವಜನಿಕರ ಆಕ್ಷೇಪಣೆ ಆಲಿಕೆ ಸಭೆಯಲ್ಲಿ ನಾಗರೀಕರ ಹಕ್ಕು ಉಲ್ಲಂಘನೆಯಾಗಿರುವುದಿಲ್ಲ.

ಈ) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಈ ಬಗ್ಗೆ ಕ್ರಮ ಕೈಗೊಳ್ಳವಂತೆ ರಾಜ್ಯ ಸರ್ಕಾರಕ್ಕೆ ಯಾವುದೇ ನಿರ್ದೇಶನ ನೀಡಿರುವುದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಂಠೀರವ ಸ್ಟುಡಿಯೋ ಮುಖ್ಯರಸ್ತೆಯಲ್ಲಿ ಅಕ್ರಮ ಅಂಗಡಿಗಳು

1549 (1763) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರಹಳ್ಳಿ ಕ್ಷೇತ್ರಕ್ಕೆ ಸೇರಿದ ದಾಸರಹಳ್ಳಿ ನಗರಸಭೆ ವ್ಯಾಪ್ತಿಗೆ ಬರುವ ಶ್ರೀ ಕಂಠೀರವ ಸ್ಟುಡಿಯೋ ರಸ್ತೆಗೆ ಸೇರುವ ಶ್ರೀ ಐ.ಆರ್. ಪಾಲಿಟೆಕ್ನಿಕ್ ರಸ್ತೆಯಲ್ಲಿ ಅಕ್ರಮ ಅಂಗಡಿಗಳನ್ನು ಕಟ್ಟಿ ವ್ಯಾಪಾರ ನಡೆಸುತ್ತಿರುವುದರಿಂದ ರಸ್ತೆಯಲ್ಲಿ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲದೆ, ಸದರಿ ರಸ್ತೆಯಲ್ಲಿ ಜನರು ಕಸಕಡ್ಡಿ ಹಾಗೂ ಇತರೆ ಅನುಪಯುಕ್ತ ಪದಾರ್ಥಗಳನ್ನು ಸುರಿದು ಪರಿಸರವನ್ನು ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ಹೌದು

ಇ) (ಅ) ಶ್ರೀ ಐ.ಆರ್. ಪಾಲಿಟೆಕ್ನಿಕ್ ರಸ್ತೆಯಲ್ಲಿನ ಅಕ್ರಮ ಅಂಗಡಿಗಳ ಬಗ್ಗೆ ಭೂಮಾಪಕರಿಗೆ ಸರ್ವೆ ಮಾಡಲು ಸೂಚಿಸಿದ್ದು, ಅವರಿಂದ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

(ಆ) ಈ ಪ್ರದೇಶವು ನಗರಸಭೆಯಿಂದ ಆಗಿಂದಾಗ್ಗೆ ಸ್ವಚ್ಛಗೊಳಿಸಲಾಗುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋಗಳನ್ನು ಪ್ರಾರಂಭಿಸುವುದು

1550 (730) ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಹಾಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಷ್ಟು ಬಸ್ ಡಿಪೋಗಳಿವೆ.

ಅ) ನೂತನ ಬಸ್ ಡಿಪೋಗಳನ್ನು ಪ್ರಾರಂಭಿಸುವ ಉದ್ದೇಶವಿದೆಯೇ?

ಇ) ಹಾಗಿದ್ದಲ್ಲಿ ಇದರ ವಿವರಗಳೇನು?

ಶ್ರೀ ರಮಾನಾಥ ರೈ (ಸಾರಿಗೆ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 2 ಡಿಪೋಗಳು ಕಾರ್ಯನಿರ್ವಹಿಸುತ್ತಿವೆ. ಅವು ಮಂಡ್ಯ ಮತ್ತು ಮದ್ದೂರು.

ಆ) ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಡಿಪೋ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮಳವಳ್ಳಿಯಲ್ಲಿ 5.36 ಎಕರೆ ಜಮೀನನ್ನು ದಿನಾಂಕ : 28.3.2002 ರಂದು ಸ್ವಾಧೀನಕ್ಕೆ ಪಡೆದಿರುತ್ತದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಡಿಪೋ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಮಂಡ್ಯ ನಗರದಲ್ಲಿನ ಮದ್ಯ ಮಾರಾಟ ಅಂಗಡಿಗಳು

1552 (1965) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ವಿವಿಧ ವರ್ಗಗಳ ಅಡಿ ಮಂಜೂರಾಗಿ ಮದ್ಯ ಮಾರಾಟ ಮಾಡುತ್ತಾ ಇರುವ ಮದ್ಯದ ಅಂಗಡಿಗಳೆಷ್ಟು?

ನಗರದ ಜನಸಂಖ್ಯೆಗೆ ಅನುಗುಣವಾಗಿದೆಯೇ?

ಆ) ಈ ರೀತಿ ಮಂಜೂರಾತಿ ಮಾಡುವಾಗಿನ ನಿಬಂಧಗಳೇನು ಹಾಗೂ ಸಾರ್ವಜನಿಕರಿಂದ ನಿರಾಕ್ಷೇಪಣೆಯನ್ನು ಪಡೆಯಲಾಗಿದೆಯೇ?

ಇ) ಮದ್ಯ ಮಾರಾಟವನ್ನು ಸಗಟು ಅಥವಾ ಚಿಲ್ಲರೆಯಾಗಿ ಮಾರಾಟ ಮಾಡಲು ಅನುಸರಿಸಬೇಕಾದ ನಿಯಮಾವಳಿಗಳೇನು?

ಈ) ರಿಟೈಲ್ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಾ ಇರುವ ಕಾರ್ಯವೈಖರಿ ಸಾರ್ವಜನಿಕರಿಗೆ ನ್ಯೂಸೆನ್ಸ್ (Public Nuisance) ಆಗಿರುವುದನ್ನು ಗಮನಿಸಲಾಗಿದೆಯೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಸಿ ಎಲ್.1 - 4

ಸಿ ಎಲ್ 2 - 23

ಸಿ ಎಲ್ 4 - 2

ಸಿ ಎಲ್ 9 - 22

ಹೌದು

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಹೌದು

ಇ) ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿಯ ಮದ್ಯ ಮಾರಾಟ) ನಿಯಮಗಳು 1968ನ್ನು ಅನುಸರಿಸಲಾಗುತ್ತದೆ.